ಕೊಟ್ಟಿದ್ದಾರೆ. ಕೆಲವೇ ನಿಮಿಷಗಳ ಹಿಂದೆ ಮಾನ್ಯ ಸದಸ್ಯರೊಬ್ಬರು ಇದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದರು. ಆಗ ಅವರು ಕೊಟ್ಟಿರತಕ್ಕಂಥ ಉತ್ತರ. ಈಗ ಮಾನ್ಯ ಸದಸ್ಯರು ಪ್ರಸ್ತಾಪಿಸಿರತಕ್ಕಂಥ ಆತಂಕವನ್ನು ಸಮಾಧಾನ ಪಡಿಸುತ್ತದೆಂದು ನಾನು ತಿಳಿದುಕೊಳ್ಳುತ್ತೇನೆ.

ವಿಷಯ: (ಊ) ಜಿಲ್ಲಾ ನ್ಯಾಯಾಲಯಗಳಲ್ಲಿ ಹಾಗೂ ಗ್ರಾಹಕರ ವೇದಿಕೆಗಳಲ್ಲಿ "ಸಿ" ವರ್ಗದ ನೌಕರಿ ಸಂದರ್ಶನಕ್ಕಾಗಿ ಸಾವಿರಾರು ಅಭ್ಯರ್ಥಿಗಳನ್ನು ಕರೆಯುತ್ತಿರುವ ಬಗ್ಗೆ.

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೆ, ಜಿಲ್ಲಾ ನ್ಯಾಯಾಲಯಗಳಲ್ಲಿ ಹಾಗೂ ಗ್ರಾಹಕರ ವೇದಿಕೆಗಳಲ್ಲಿ 'ಸಿ' ವರ್ಗದ ನೌಕರಿ ಸಲುವಾಗಿ ಅಲ್ಲಿ ಇರುವ ಕೆಲವೇ ಸ್ಥಾನಗಳ ಸಲುವಾಗಿ ಸಾವಿರಾರು ಜನರನ್ನು ಇಂಟವ್ಯೂಗೆ ಕರೆದಿದ್ದಾರೆ. ಇದರಿಂದ ಬಹಳಷ್ಟು ಯುವಕರಿಗೆ ನಿರಾಶೆಯಾಗುತ್ತದೆ. ದಯವಿಟ್ಟು ನೌಕರಿ ರಿಕ್ರೂಟ್‌ಮೆಂಟ್ ಸಲುವಾಗಿ ಏನಾದರೂ ರೂಲ್ಸ್ ಮಾಡಿ ಒಂದು ಹುದ್ದೆ ಇದ್ದರೆ ಐದು ಜನರಿಗೆ 10 ಜನರಿಗೆ ಸಂದರ್ಶನ ಕರೆದರೆ ಅಡ್ಡಿ ಇಲ್ಲ. ಒಂದು ಅವಕಾಶ ಇದ್ದರೆ 100 ಜನರಿಗೆ ಸಾವಿರ ಜನರಿಗೆ ಕರೆಯುತ್ತಾರೆ. ಈ ರೀತಿ ಜನರಿಗೆ ತೊಂದರೆಯಾಗುವ ಹಾಗೆ, ಜನರಿಗೆ ಶೋಷಣೆ ಆಗುವ ಹಾಗೆ, ಜನರಿಗೆ ನಿರಾಶೆ ಆಗುವ ಹಾಗೆ ಇರುವ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಮುಂದೆ ಇಂತಹ ತೊಂದರೆ ಯುವಕ ಯುವತಿಯರಿಗೆ ಆಗದ ಹಾಗೆ ಕಾನೂನು ಸಚಿವರು ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಕೆಲವು ಕಡೆ ಅಭ್ಯರ್ಥಿಗಳನ್ನು ಏನು ಸಂದರ್ಶನಕ್ಕಾಗಿ ಕರೆಯುತ್ತಿದ್ದಾರೆ. ಒಂದಕ್ಕೆ 10 ಅಥವಾ ಒಂದಕ್ಕೆ 20 ರೇಷಿಯೋ ಮೇಲೆ ಕರೆಯುತ್ತಿದ್ದರು. ಆದರೆ ಇತ್ತೀಚೆಗೆ ನ್ಯಾಯಾಲಯದಲ್ಲಿ ನೇಮಕ ಮಾಡತಕ್ಕಂಥದ್ದರ ಬಗ್ಗೆ ಸಂದರ್ಶನ ಕರೆಯುವಾಗ ಬಹಳ ದೊಡ್ಡ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ಕರೆಯುತ್ತಿದ್ದಾರೆ, ಎಷ್ಟು ಜನ ಅರ್ಜಿ ಹಾಕುತ್ತಾರೋ ಅಷ್ಟೂ ಜನರಿಗೆ ಸಂದರ್ಶನಕ್ಕೆ ಕರೆಯುತ್ತಿದ್ದಾರೆ. ಸ್ಟೇಟ್ ಕನ್‌ಸ್ಯೂಮರ್ ಫೋರಂನಲ್ಲಿ ಸಹಿತ ಅದೇ ರೀತಿಯಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ಸಂದರ್ಶನಕ್ಕೆ ಅಭ್ಯರ್ಥಿಗಳನ್ನು ಕರೆದಿದ್ದಾರೆ ಎಂದು ಈಗಾಗಲೇ ಬಹಳಷ್ಟು ಮಿತ್ರರು ಬಂದು ಸುಮಾರು 400, 500 ಮತ್ತು 600 ಕಿ.ಮಿ. ದೂರದಿಂದ ಸಾವಿರಗಟ್ಟಲೆ ಅಭ್ಯರ್ಥಿಗಳು ಬರುತ್ತಾರೆ. ಬಹಳಷ್ಟು ಖರ್ಚು ಮಾಡುತ್ತಾರೆ. ಇರುವ 10 ಹುದ್ದೆಗಳಿಗೆ ಏಕೆ ಈ ರೀತಿಯಾಗಿ ಶೋಷಣೆಗೆ ಅವಕಾಶ ಮಾಡಿ ಕೊಡುತ್ತೀರಿ ಎಂಬ ಬಗ್ಗೆ ತಮ್ಮ ಆತಂಕ ಹೇಳಿದ್ದೀರಿ. ಸನ್ಮಾನ್ಯ ಶಾಸಕರು ಹೇಳತಕ್ಕಂತಹ ಮಾತನ್ನು ಗಮನಿಸುತ್ತೇನೆ. ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಯಾವ ರೀತಿ ನಮ್ಮ ನಿರ್ದೇಶನ ಕೊಡುವುದಕ್ಕೆ ಸಾಧ್ಯವೋ ಅದನ್ನು ಪರಿಶೀಲನೆ ಮಾಡುತ್ತೇನೆ.

4. ವರದಿಗಳನ್ನೊಪ್ಪಿಸುವುದು

ಶ್ರೀ ವಿವೇಕಾನಂದ ಪೈದ್ಯ (ಬಿಸಿ) (ಅಧ್ಯಕ್ಷರ ಪರವಾಗಿ) : ಮಾನ್ಯ ಅಧ್ಯಕ್ಷರೆ, ನಾನು 2004--2005ನೇ ಸಾಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿಯ ಮೊದಲನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.